ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 518/2019

ಸಿ.ಡಬ್ಲ್ಯೂ -7, ಪಿ.ಡಬ್ಲ್ಯೂ.,5

ದಿಃ **12.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಅನಿಲ್ ಕುಮಾರ್ |
| ಗಂಡ/ತಂದೆಯ ಹೆಸರು | ರಾಮೇಗೌಡ |
| ವಯಸ್ಸು | 40 ವರ್ಷ |
| ಕೆಲಸ | ಮುಖ್ಯಪೇದೆ |
| ವಾಸಸ್ಥಳ | ಇಲವಾಲ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ನಾನು 2018 ರಿಂದ 2020 ರವರೆಗೆ ರಲ್ಲಿ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01.05.2018 ರಂದು ಮೊಕದ್ದಮೆ ಸಂಖ್ಯೆ 205/2018 ರ ಆರೋಪಿತರ ಪತ್ತೆಗಾಗಿ ನನ್ನನ್ನು ಚಾಸಾ8 ರವರನ್ನು ನೇಮಕ ಮಾಡಿರುತ್ತಾರೆ. ಅದರಂತೆ ನಾವು ಬೆಳಿಗ್ಗೆ 5.30 ಗಂಟೆಗೆ ಠಾಣೆಯಿಂದ ಹೊರಟು ಬೋಳನಹಳ್ಳಿ ಗ್ರಾಮದ ದಾರಿಯಲ್ಲಿ ಗಸ್ತು ಮಾಡುವಾಗ ಹೊಸರಾಮನ ಹಳ್ಳಿಯಲ್ಲಿ ಬಾತ್ಮಿದಾರರ ಮಾಹಿತಿಯಂತೆ ಆರೋಪಿತರು ಹೊಸರಾಮನಹಳ್ಳಿ ಬಸ್ ನಿಲ್ದಾಣದ ಬಳಿ ಇದ್ದಾಗ ಬೆಳಿಗ್ಗೆ 6 ಗಂಟೆಗೆ ಇಬ್ಬರನ್ನು ವಶಕ್ಕೆ ಪಡೆದು ಬೆಳಿಗ್ಗೆ 6.30 ಗಂಟೆಗೆ ಠಾಣಾಧಿಕಾರಿಗಳ ಮುಂದೆ ನಾನು ಮತ್ತು ಚಾಸಾ8 ರವರು ಹಾಜರುಪಡಿಸಿರುತ್ತೇವೆ. ಈ ಬಗ್ಗೆ ಚಾಸಾ8 ರವರು ವರದಿಯನ್ನು ನೀಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ವಿ ಜಿ ಎಂ ವಕೀಲರಿಂದಃ**

ನಾನು ಮತ್ತು ಚಾಸಾ8 ರವರು ಬಿಳಿಕೆರೆಯಿಂದ ಪ್ಯಾಸೆಂಜರ್ ಆಟೋ ಮಾಡಿಕೊಂಡು ಆರೋಪಿತರ ಪತ್ತೆಗಾಗಿ ಹೊರಟಿದ್ದೆವು. ಆಟೋ ನಂಬರ್ ನನಗೆ ನೆನಪಿಲ್ಲ. ಬಿಳಿಕೆರೆಯಿಂದ ಹೊಸರಾಮನಹಳ್ಳಿಗೆ 5–6 ಕಿ ಮೀ ದೂರವಾಗುತ್ತದೆ, ಸುಮಾರು 10 ನಿಮಿಷವಾಗುತ್ತದೆ. ನಾವು ಬಾತ್ಮಿದಾರರಿಂದ ಆರೋಪಿತರ ಬಗ್ಗೆ ಮಾಹಿತಿ ಪಡೆದೆವು. ನಾವು ಆರೋಪಿತರನ್ನು ಹಿಡಿಯಲು ಹೋದಾಗ ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿರಲಿಲ್ಲ. ನಾವು ಆಟೋದಲ್ಲಿ ಹೋದ ಬಗ್ಗೆ ಹೇಳಿಕೆಯಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿತರು ಮನೆಯಲ್ಲೇ ಇದ್ದರು

ಅವರನ್ನು ಚಾಸಾ2 ರವರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ8 ರವರು ಆರೋಪಿತರನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 8 ರವರು ಮೇಲಾಧಿಕಾರಿಗಳ ಒತ್ತಡದ ಮೇರೆ ಸುಳ್ಳು ದೂರಿನ ಮೇಲೆ ಕ್ರಮ ಕೈಗೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,

ಹುಣಸೂರು.

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 518/2019**

**ಸಿ.ಡಬ್ಲ್ಯೂ -8, ಪಿ.ಡಬ್ಲ್ಯೂ,6**

ದಿಃ **12.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ನಾಗರಾಜು |
| **ಗಂಡ/ತಂದೆಯ ಹೆಸರು** | **ಮಾಸ್ತಯ್ಯ** |
| **ವಯಸ್ಸು** | **41** ವರ್ಷ |
| **ಕೆಲಸ** | **ಪೇದೆ** |
| ವಾಸಸ್ಥಳ | ಕಟ್ಟೆಮಳಲವಾಡಿ |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನಾನು 29.08.2014 ರಿಂದ 10.08.2022 ರವರೆಗೆ ರಲ್ಲಿ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01.05.2018 ರಂದು ಮೊಕದ್ದಮೆ ಸಂಖ್ಯೆ 205/2018 ರ ಆರೋಪಿತರ ಪತ್ತೆಗಾಗಿ ನನ್ನನ್ನು ಚಾಸಾ7 ರವರನ್ನು ನೇಮಕ ಮಾಡಿರುತ್ತಾರೆ. ಅದರಂತೆ ನಾವು ಬೆಳಿಗ್ಗೆ 5.30 ಗಂಟೆಗೆ ಠಾಣೆಯಿಂದ ಹೊರಟು ಬೋಳನಹಳ್ಳಿ ಗ್ರಾಮದ ದಾರಿಯಲ್ಲಿ ಗಸ್ತು ಮಾಡುವಾಗ ಹೊಸರಾಮನ ಹಳ್ಳಿಯಲ್ಲಿ ಬಾತ್ಮಿದಾರರ ಮಾಹಿತಿಯಂತೆ ಆರೋಪಿತರು ಹೊಸರಾಮನಹಳ್ಳಿ ಬಸ್ ನಿಲ್ದಾಣದ ಬಳಿ ಇದ್ದಾಗ ಬೆಳಿಗ್ಗೆ 6 ಗಂಟೆಗೆ ಇಬ್ಬರನ್ನು ವಶಕ್ಕೆ ಪಡೆದು ಬೆಳಿಗ್ಗೆ 6.30 ಗಂಟೆಗೆ ಠಾಣಾಧಿಕಾರಿಗಳ ಮುಂದೆ ನಾನು ಮತ್ತು ಚಾಸಾ7 ರವರು ಹಾಜರುಪಡಿಸಿರುತ್ತೇವೆ. ಈ ಬಗ್ಗೆ ನಾನು ವರದಿಯನ್ನು ನೀಡಿರುತ್ತಾರೆ. ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ವಿ ಜಿ ಎಂ ವಕೀಲರಿಂದಃ</u>**

ನಾನು ಮತ್ತು ಚಾಸಾ7 ರವರು ಆರೋಪಿತರನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 7 ರವರು ಮೇಲಾಧಿಕಾರಿಗಳ ಒತ್ತಡದ ಮೇರೆ ಸುಳ್ಳು ದೂರಿನ ಮೇಲೆ ಕ್ರಮ ಕೈಗೊಂಡಿರುತ್ತೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.